		ದೇವದುರ್ಗ	3
		ಮಾನ್ವಿ	3
		ಸಿಂಧನೂರು	1
27	ಕೊಪ್ಪಳ	ಗಂಗಾವತಿ	3
		ಯಲ್ಬುರ್ಗ	4
		ಕೊಪ್ಪಳ	2
		ಕುಷ್ಟಗಿ	2
		ಒಟ್ಟು	**266**

637 (872) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಬಾಲ ಕಾರ್ಮಿಕರ ಸಂಖ್ಯೆ ಎಷ್ಟು? (ಕ್ಷೇತ್ರವಾರು ಹಾಗೂ ಜಮಖಂಡಿ ತಾಲ್ಲೂಕಿನ ಮಾಹಿತಿಯನ್ನು ಒದಗಿಸುವುದು)

ಆ) ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಸರಕಾರದಲ್ಲಿರುವ ಕಾರ್ಯ ಕ್ರಮಗಳಾವುವು?

ಇ) ಬಾಲ ಕಾರ್ಮಿಕ ಪದ್ಧತಿಯನ್ನು ತಡೆಯಲು ಇರುವ ಕಾನೂನಾತ್ಮಕ ನಿಯಮಗಳಾವುವು?

ಈ) ದಿನಾಂಕ 01-04-2006 ರಿಂದ ಇಲ್ಲಿಯವರೆಗೆ ದಾಖಲಿಸಿದ ಪ್ರಕರಣಗಳೆಷ್ಟು? ಶಿಕ್ಷೆಯಾಗಿರದ ಪ್ರಕರಣಗಳೆಷ್ಟು?

ಉ) ದಿನಾಂಕ 1-4-2005 ರಿಂದ ಎಷ್ಟು ಬಾಲ ಕಾರ್ಮಿಕರನ್ನು ಮುಕ್ತಗೊಳಿಸಲಾಗಿದೆ, ಆ ಎಲ್ಲಾ ಬಾಲ ಕಾರ್ಮಿಕರು ಈಗ ಎಲ್ಲಿದ್ದಾರೆ?

ಊ) ಬಾಲ ಕಾರ್ಮಿಕರ ಪುನರ್ವಸತಿಗಾಗಿ ಮತ್ತು ಅವರ ಶಿಕ್ಷಣಕ್ಕಾಗಿ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು?

ಋ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಪ್ರತಿ ವರ್ಷ ಖರ್ಚು ಮಾಡುವ ಅನುದಾನವೆಷ್ಟು? ಸಂಪೂರ್ಣ ವಿವರ ಒದಗಿಸುವುದು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು)

ಅ) ರಾಜ್ಯ ಬಾಲ ಕಾರ್ಮಿಕರ ನಿರ್ಮೂಲನಾ ಕ್ರಿಯಾ ಯೋಜನೆ ಅನ್ವಯ 2001ರಲ್ಲಿ ರಾಜ್ಯಾದ್ಯಂತ ಜಿಲ್ಲಾ ಆಡಳಿತಗಳು ನಡೆಸಿದ ಸಮೀಕ್ಷೆಯಂತೆ 39,300 ಬಾಲ ಕಾರ್ಮಿಕರು ಇರುತ್ತಾರೆ ಅದರಂತೆ ಜಮಖಂಡಿ ತಾಲ್ಲೂಕಿನಲ್ಲಿ 96 ಬಾಲ ಕಾರ್ಮಿಕರು ಇರುತ್ತಾರೆ

ಕ್ಷೇತ್ರವಾರು ಸಮೀಕ್ಷೆ ಲಭ್ಯ ಇರುವುದಿಲ್ಲ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ

ಆ) ರಾಜ್ಯದಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಕೇಂದ್ರದ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ ಹಾಗೂ ರಾಜ್ಯ ಸರ್ಕಾರದ ಬಾಲ ಕಾರ್ಮಿಕ ಯೋಜನೆ ಹಾಗೂ ರಾಜ್ಯ ಸರ್ಕಾರದ ಬಾಲ ಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ ಈ ಯೋಜನೆಗಳ ಅಡಿಯಲ್ಲಿ ಕೆಳಕಂಡ ಕ್ರಮಗಳನ್ನು ಜಾರಿಗೊಳಿಸಲಾಗುತ್ತಿದೆ

1] ಅಪಾಯಕಾರಿ ಅಥವಾ ಅಪಾಯಕಾರಿಯಲ್ಲದ ಕಾರ್ಯ ಚಟುವಟಿಕೆಗಳೆರಡರಲ್ಲೂ ಮಜೂರಿಗಾಗಿ ಅಥವಾ ಜೀವನೋಪಾಯಕ್ಕಾಗಿ ದುಡಿಯುವುದರಿಂದ 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಪ್ರತಿಬಂಧಿಸುವುದು

2] 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಗುರುತಿಸಲು ಮತ್ತು ಅವರು ದುಡಿಯುತ್ತಿರುವುದು ಕಂಡುಬಂದರೆ ಅವರನ್ನು ಬಿಡುಗಡೆಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುವುದು

3] ಬಿಡುಗಡೆಯಾದ ಬಾಲ ಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು

4] ಬಾಲ ಕಾರ್ಮಿಕರ ಕುಟುಂಬಗಳ ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಬಡತನ ನಿರ್ಮೂಲನಾ ಯೋಜನೆ ಅಡಿಯಲ್ಲಿ ಉದ್ಯೋಗ ನೀಡಲಾಗುತ್ತಿದೆ

5] ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನ ಮಾಡುವುದಕ್ಕೆ ಸಕಾರಾತ್ಮಕವಾದ ವಾತಾವರಣವನ್ನು ಕಲ್ಪಿಸಲು ಸಮುದಾಯ ಪಾಲ್ಗೊಳ್ಳುವಿಕೆಯ ಮೂಲಕ ಸಮೂಹಕ್ಕೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಕೈಗೆತ್ತಿಕ್ಕೊಳ್ಳುವುದು

ಇ) ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986, ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ಹಾಗೂ ಅವುಗಳ ಅಡಿಯಲ್ಲಿ ರಚಿಸಿರುವ ನಿಯಮಗಳು ಬಾಲ ಕಾರ್ಮಿಕ ಪದ್ಧತಿ ತಡೆಯುವ ಕಾನೂನುಗಳಾಗಿರುತ್ತವೆ

ಈ) 1–4–2006 ರಿಂದ ಇಲ್ಲಿಯವರೆಗೆ 216 ಪ್ರಕರಣಗಳು ದಾಖಲಿಸಲಾಗಿದೆ ಈ ಅವಧಿಯಲ್ಲಿ ಶಿಕ್ಷೆಯಾಗಿರದ ಪ್ರಕರಣಗಳು ಯಾವುದೂ ಇರುವುದಿಲ್ಲ

ಉ) 1–4–2005 ರಿಂದ 3614 ಬಾಲ ಕಾರ್ಮಿಕರನ್ನು ವಿಮುಕ್ತಿಗೊಳಿಸಲಾಗಿದ್ದು, ಅವರು ವಿಶೇಷ ಶಾಲೆಗಳಲ್ಲಿ ಅಥವಾ ಮುಖ್ಯವಾಹಿನಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ

ಊ) ಬಾಲ ಕಾರ್ಮಿಕರನ್ನು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ/ರಾಜ್ಯ ಬಾಲ ಕಾರ್ಮಿಕರ ಕ್ರಿಯಾ ಯೋಜನೆ ಅಡಿಯಲ್ಲಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿ ದಾಖಲು ಮಾಡಿ ಪುನರ್ ವಸತಿ ಕಲ್ಪಿಸಲಾಗುತ್ತಿದೆ ತದನಂತರ ಶಿಕ್ಷಣವನ್ನು ಮುಂದುವರೆಸಲು ಬಾಲ ಕಾರ್ಮಿಕರ ವಯಸ್ಸು ಮತ್ತು ಕಲಿಕಾ ಸಾಮರ್ಥ್ಯದ ಆಧಾರದ ಮೇಲೆ ಮುಖ್ಯ ವಾಹಿನಿ ಶಾಲೆಗಳಲ್ಲಿ ದಾಖಲು ಮಾಡಲಾಗುತ್ತಿದೆ

ಋ) ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಪ್ರತಿ ವರ್ಷ ಖರ್ಚು ಮಾಡುವ ಅನುದಾನದ ವಿವರಗಳು ಈ ಕೆಳಕಂಡಂತೆ ಇವೆ

ವರ್ಷ	ರಾಜ್ಯ ಸರ್ಕಾರ	ಕೇಂದ್ರ ಸರ್ಕಾರ
	ರೂ	ರೂ
2001–02	19,49,308	18,64,22,110
2002–03	88,31,696	1,30,96,628
2003–04	1,68,82,802	1,99,70,337
2004–05	1,45,28,326	2,15,50,351
2005–06	1,53,34,940	3,23,68,181
2006–07 ಇಲ್ಲಿಯವರೆಗೆ	1,48,88,664	53,94,292

ಅನುಬಂಧ

ಬಾಲ ಕಾರ್ಮಿಕರ ಜಿಲ್ಲಾವಾರು ವಿವರಗಳು

ಕ್ರ.ಸಂ	ಜಿಲ್ಲೆಯ ಹೆಸರು	ಅಪಾಯಕಾರಿ ಸಂಸ್ಥೆಗಳಲ್ಲಿನ ಬಾಲ ಕಾರ್ಮಿಕರು	ಅಪಾಯಕಾರಿ ಅಲ್ಲದ ಸಂಸ್ಥೆಗಳಲ್ಲಿನ ಬಾಲ ಕಾರ್ಮಿಕರು	ಒಟ್ಟು
1	ಬೆಂಗಳೂರು (ನಗರ)	938	876	1811
2	ಬೆಂಗಳೂರು (ಗ್ರಾ)	1894	739	2633
3	ಬೆಳಗಾಂ	36	84	120
4	ಬಳ್ಳಾರಿ	382	3853	4235
5	ಬೀದರ್	65	299	364
6	ಬಿಜಾಪುರ	102	656	758
7	ಬಾಗಲಕೋಟೆ	334	338	672
8	ಚಿತ್ರದುರ್ಗ	42	1019	1061
9	ಚಿಕ್ಕಮಗಳೂರು	90	45	135
10	ಚಾಮರಾಜನಗರ	117	84	201
11	ದಕ್ಷಿಣ ಕನ್ನಡ	28	24	52
12	ಧಾರವಾಡ	41	53	94
13	ದಾವಣಗೆರೆ	419	1977	9496
14	ಗುಲ್ಬರ್ಗ	138	1254	1392
15	ಗದಗ	25	880	905
16	ಹಾಸನ	81	78	159
17	ಹಾವೇರಿ	56	1040	1096
18	ಕೊಡಗು	27	34	61

19	ಕೋಲಾರ	1382	1800	3182
20	ಕೊಪ್ಪಳ	105	269	374
21	ಮಂಡ್ಯ	299	5668	5967
22	ಮೈಸೂರು	197	368	565
23	ರಾಯಚೂರು	105	1815	1920
24	ಶಿವಮೊಗ್ಗ	44	44	88
25	ತುಮಕೂರು	133	73	206
26	ಉತ್ತರ ಕನ್ನಡ	03	1708	1711
27	ಉಡುಪಿ	29	10	39
	ಒಟ್ಟು	**7,112**	**32,188**	**39,300**

638 (873) ಶ್ರೀ ಸಿದ್ದು ಸಾವದಿ (ಜಮಖಂಡಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಎಷ್ಟು (ಪ್ರತ್ಯೇಕ ಮಾಹಿತಿ ಒದಗಿಸುವುದು)?

ಆ) ಈ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆಗಳು ಸರ್ಕಾರದ ಮುಂದೆ ಬಂದಿದೆಯೇ? ಹಾಗಿದ್ದಲ್ಲಿ, ಏನು ಕ್ರಮ ಜರುಗಿಸಿದ್ದೀರಿ? ಈ ಬಗ್ಗೆ ಕೈಗೊಂಡ ಕ್ರಮವೇನು?

ಇ) ಮೇಲ್ದರ್ಜೆಗೇರಿಸಲು ಇರುವ ನಿಯಮಾವಳಿಗಳೇನು?

ಈ) ರಬಕವಿ ಬನಹಟ್ಟಿ ನಗರ ಸಭೆಯಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರವು ಒಂದು ಲಕ್ಷ ಜನಸಂಖ್ಯೆಯನ್ನು ಹೊಂದಿರುವುದರಿಂದ ಇದನ್ನು ಮೇಲ್ದರ್ಜೆಗೇರಿಸಲು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು?

ಉ) ತೇರದಾಳ ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಹ ಮೇಲ್ದರ್ಜೆಗೇರಿಸಲು ಈಗಾಗಲೇ ಪ್ರಸ್ತಾವನೆಯನ್ನು ಕಳಿಸಲಾಗಿದೆ ಸುಮಾರು